# ನಂಬಿಕೆಯೇ ಜೀವನ

'ಚಂದಮಾಮ' ಮಾಸಪತ್ರಿಕೆಯ 1982ರ ಜುಲೈ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಕಥೆಯೊಂದು ಗಮನ ಸೆಳೆಯಿತು:

ಗಂಗಾಪುರದಲ್ಲಿ ನಾಲ್ವರು ಸ್ನೇಹಿತರಿದ್ದರು. ಅವರಲ್ಲಿ ರಂಗನೆಂಬುವನಿಗೆ ಕತ್ತಲಾದ ಮೇಲೆ ಎಲ್ಲಿಗೆ ಹೋಗಬೇಕಾದರೂ ತುಂಬಾ ಭಯ. ರಾತ್ರಿಯಲ್ಲಿ ಯಾರಾದರೂ ಜತೆಯಲ್ಲಿಲ್ಲದೆ ಹೋದರೆ ಹೊಸ್ತಿಲು ದಾಟಿ ಹೊರ ಅಂಗಳಕ್ಕೆ ಬರುವವನಲ್ಲ.

ಒಂದು ದಿನ ಅವನ ಗೆಳೆಯರು ಅವನಿಗೆ ಗೇಲಿಮಾಡಿ ನಗುತ್ತ, 'ನಿನ್ನಷ್ಟು ಪುಕ್ಕನನ್ನು ನಾವು ಎಲ್ಲಿಯೂ ನೋಡಿಲ್ಲ. ಯಾರಾದರೂ ಧೈರ್ಯದ ವಿಷಯದಲ್ಲಿ ನಿನ್ನನ್ನು ಪಂಥಕ್ಕೆ ಕರೆದರು ಅಂದುಕೋ. ಆಗ ನಿನ್ನ ಪುಕ್ಕಲತನ ಬಟಾಬಯಲಾಗಿ ಹೋಗುತ್ತೆ' ಎಂದರು.

'ಬರೀ ಬಾಯಿಯ ಪಂಥಕ್ಕೆಲ್ಲ ನಾನು ಲಕ್ಷ್ಯ ಕೊಟ್ಟರೆ ತಾನೇ? ಯಾರಾದರೂ ಹಣವನ್ನಿಟ್ಟು ಪಂಥ ಕಟ್ಟಲಿ, ನನ್ನ ಧೈರ್ಯ ಆಗ ತೋರಿಸುತ್ತೇನೆ' ಎಂದನು ರಂಗ ಒಳ್ಳೇ ಧೀರನ ಹಾಗೆ.

'ಹಾಗೇನು! ಇಕೋ, ನಾವೇ ಕಟ್ಟುತ್ತೇವೆ ನೂರು ರೂಪಾಯಿ ಪಂಥ. ಈ ದಿನ ರಾತ್ರಿ ನೀನು ಸ್ಮಶಾನದೊಳಗೆ ಹೋಗಿ ಹಿಂದಿರುಗಿ ಬಂದರೆ ನೂರು ರೂಪಾಯಿ ನಿನಗೆ ಕೊಡುತ್ತೇನೆ. ಅದಕ್ಕೆ ತಪ್ಪಿದರೆ ನೀನು ನಮಗೆ ನೂರು ರೂಪಾಯಿ ಕೊಡಬೇಕು' ಎಂದರು ಸ್ನೇಹಿತರು.

ರಂಗನು ಅದಕ್ಕೆ ಒಪ್ಪಿಕೊಂಡು ಅರ್ಧ ರಾತ್ರಿಯ ಹೊತ್ತಿನಲ್ಲಿ ಮನೆಯಿಂದ ಹೊರಟು ಸ್ಮಶಾನಕ್ಕೆ ಹೋಗಿ, ಹಿಂದಿರುಗಿ ಆ ಸ್ನೇಹಿತರಲ್ಲಿ ಒಬ್ಬನ ಮನೆಗೆ ಬಂದು ನೂರು ರೂಪಾಯಿ ಪಡೆದುಕೊಂಡು, ಬೆಳಗಾಗುವವರೆಗೆ ಅಲ್ಲೇ ಇದ್ದು ತನ್ನ ಮನೆಗೆ ಹೋದನು.

ರಾತ್ರಿ ಅವನನ್ನು ಕಾಣದಿದ್ದ ಅಣ್ಣನು, ವಿಚಾರಿಸಲಾಗಿ ರಂಗನು ತಾನು ಪಂಥದಲ್ಲಿ ಗೆದ್ದಿರುವ ಸಂಗತಿಯನ್ನು ಹೇಳಿದನು.

'ರಾತ್ರಿಯಲ್ಲಿ ಒಬ್ಬನೇ ಹೋಗಲು ಹೆದರುವ ನಿನಗೆ ಸ್ಮಶಾನಕ್ಕೆ ಹೋಗುಷ್ಟು ಧೈರ್ಯ ಹೇಗೆ ಬಂತು?' ಎಂದು ಕೇಳಿದನು ಅವನ ಅಣ್ಣ.